ಸುಖಾಂತ್ಯವಾಯ್ತು. ಆಯ್ತೇ? ಅಥವಾ ಹಾಗೆ ನಂಬಿಸಿಕೊಳ್ಳುತ್ತಿರುವುದಾ? ಎಲ್ಲರ ಗೌರವಕ್ಕೆ ಪಾತ್ರರಾಗಿ ಎದೆ ಸೆಟೆಸಿ ನಡೆಯುತ್ತಿದ್ದ ಜೀವಕ್ಕೆ ಮಗಳ ಮದುವೆಯಾದ ಮೇಲೆ ಹೊಸ ಅನುಭವಕ್ಕೆ ತೆರೆದುಕೊಳ್ಳಬೇಕಾದ ಅನಿವಾರ್ಯ. ದೇವರೇ, ಈ ಬದುಕು ಎಂಬುದು ಎಷ್ಟು ತೊಳಸಂಬಟ್ಟೆ. ಗೋಜಲು. 'ತಾ ಭಲಾ, ಜಗ ಭಲಾ' ಎನ್ನುವ ಹೇಳಿಕೆ ಮಾತುಂಟು. ತಾವು ಒಳ್ಳೆಯವರಾಗಿದ್ದುಬಿಟ್ಟರೆ ಜಗತ್ತು ತಮ್ಮನ್ನು ಪುರಸ್ಕರಿಸದೆ ಎಲ್ಲಿಗೆ ಹೋಗುತ್ತದೆ ಎನ್ನುವ ನಂಬಿಕೆಗೆ ಕಲ್ಲು ಬಿದ್ದಂತೆ ಅಂಗಾಲಲ್ಲಿ ಮುಳ್ಳು ಮುರಿದ ಅನುಭವ. ಈ ವಯಸ್ಸಲ್ಲೂ ಹೊಸ ಹೊಸ ಪಾಠ ಕಲಿಯಬೇಕು ಅಂದರೆ ಸಾಯುವವರೆಗೆ ಮನುಷ್ಯ ಪಾಠ ಕಲಿಯುತ್ತಲೇ ಬದುಕಿರಬೇಕಾ? ಅದಕ್ಕೊಂದು ಕೊನೆ ಅನ್ನುವುದಿಲ್ಲವಾ? ಅರ್ಥವಾಗುತ್ತಿಲ್ಲ ಭಟ್ಟರಿಗೆ.

*****

ಬೇಕೆಂಬಷ್ಟು ಆಸ್ತಿಪಾಸ್ತಿ ಹೊಂದಿರುವ ದೊಡ್ಡ ಜಮೀನ್ದಾರರ ಮಗಳು ರಜನಿ. ಅಪ್ಪನ ನಂತರ ಎಲ್ಲಾ ಐಶ್ವರ್ಯಕ್ಕೂ ಹಕ್ಕುದಾರಿಣಿ. ನಿಲುವಾಭರಣಗಳಿಂದ ಸಿಂಗರಿಸಿ ಮಗಳನ್ನು ಕಳಿಸಿಕೊಟ್ಟ ಮಾವನನ್ನು ಅಳಿಯ ಉಯ್ಯಾಲೆಮಣೆಯಲ್ಲಿ ಕೂರಿಸಿ ತೂಗುತ್ತಾನೆ ಎನ್ನುವಂತಾ ಕಲ್ಪನೆಯಿಂದ ಭಟ್ಟರು ಬೀಗಿದ್ದರು. 'ಹೆಣ್ಣು ಕೊಟ್ಟ ಮಾವ ಕಣ್ಣು ಕೊಟ್ಟ ದೇವರು' ಅನ್ನುವ ಗಾದೆಯೇ ಇದೆ. ಹೆಣ್ಣಿನ ಜೊತೆ ಹೊನ್ನು, ಭೂಮಿ ಎಲ್ಲದರ ಹಕ್ಕುದಾರಿಕೆ ಕಾದಿದೆ. ಹಾಗಿದ್ದರೂ... ನೊಣ ನುಂಗಿದಂತೆ ಚಡಪಡಿಸಿದರು ಭಟ್ಟರು. ಅಳಿಯ ನೋಡಿದರೆ ದೊಡ್ಡ ಎಂಜಿನಿಯರ್. ತಾವು ಜಮೀನ್ದಾರಿಕೆಯ ಜನ. ಹೀಗಿದ್ದೂ ಲಡಕಾಸಿ ಆಟೋದಲ್ಲಿ ಮೈಕೈ ನುಗ್ಗಾಗಿಸಿಕೊಂಡು ತಾವು ಓಡಾಡಬೇಕೇ? ತಾವೇನು, ತಮ್ಮ ವಯಸ್ಸೇನು? ಅಳಿಯ ನಾಗಭೂಷಣ ರೈಲ್ವೆಸ್ಟೇಷನ್ನಿಗೆ ಸ್ವತಾ ಕಾರು ತಂದು ಮಾವನನ್ನು ಎದುರ್ಗೊಂಡು ಕರೆದುಕೊಂಡು ಹೋಗುವಂತಿದ್ದರೆ ತಮ್ಮ ಪ್ರತಿಷ್ಠೆ ಹೇಗಿರುತ್ತಿತ್ತು? ತಮ್ಮ ದೃಷ್ಟಿಯಲ್ಲೂ ಅವನ ತೂಕ ಏರಿರುತ್ತಿತ್ತು. ಆಯ್ತು, ರೈಲು ಬರುವ ಸಮಯ ಕಾದು ಮಾವಯ್ಯನನ್ನು ಕರೆದುಕೊಂಡು ಹೋಗುವ ಸೌಜನ್ಯ ಇಲ್ಲ. ವಾಪಸು ಹೊರಡುವಾಗಲಾದರೂ ಸ್ಟೇಷನ್ನಿನವರೆಗೆ ಬಿಟ್ಟು ಬರಬಾರದಾ? ರಜಾ ಇದ್ದರೂ? ಮನೆಯಲ್ಲೇ ಇರುವಾಗಲೂ? ಬಂದರೆ 'ಬನ್ನಿ...' ಅನ್ನುವ ವಿಶ್ವಾಸದ ಮಾತಿಲ್ಲ. ಹೊರಟರೆ 'ಇನ್ನೆರಡು ದಿನ ಇದ್ದು ಹೋಗಿ' ಅನ್ನುವ ಪ್ರೀತಿಪೂರ್ವಕ ಒತ್ತಾಯ ಇಲ್ಲ. ಅವನಾಯ್ತು, ಅವನ ಪಾಡಾಯ್ತು. ತೊಡೆಯ ಮೇಲೆ ಕಂಪ್ಯೂಟರ್ ಇಟ್ಟುಕೊಂಡು ಕೂತರೆ ಮಾತಿಲ್ಲ, ಕತೆಯಿಲ್ಲ. ಎಲ್ಲರಿಂದ ಆದರ, ಗೌರವ ಪಡೆದು

**'ಅಯ್ಯೋ ಪೆದ್ದಪ್ಪಾ, ಇನ್ನೂ ಗೊತ್ತಾಗಲಿಲ್ವೇನೋ ಉತ್ತರ? ನಿನ್ನ ಮಗಳು ಯಾರು? ಅವನ ಹೆಂಡತಿ. ಅವನಿಗೆ ಸೇರಿದವಳು. ತನ್ನ ಸ್ವಂತ ಆಸ್ತಿ ಅಂದುಕೊಂಡಿರುತ್ತಾನೆ. ತನ್ನ ಹೊರತಾಗಿಯೂ ಅಪ್ಪನ ಮೇಲೆ ಅವಳು ಅಷ್ಟೊಂದು ಜೀವ ಇಟ್ಟುಕೊಂಡಿರುವುದನ್ನು ನೋಡಿ ಅವನಿಗೆ ಸೈಸುವುದಕ್ಕಾಗುತ್ತಿಲ್ಲ. ಅದಕ್ಕೇ ನಿನ್ನ ಕಂಡರೆ ಗ್ರಾಸ್ತನಿಗೆ ಅಷ್ಟಕಷ್ಟೇ...'**